**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಓ ಎಸ್ ನಂಃ27/2022**

**ಡಿ ಡಬ್ಲ್ಯೂಃ2**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ದಿಃ 09.02.2026 ಬೋದಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಯ್ಯೂ ಎಮ್ ಪಿ ವಕೀಲರಿಂದ ವಾದಿ ಪರ ವಕೀಲರುಃ**

1. ಈ ದಾವೆ ಬಗ್ಗೆ ಮಾಹಿತಿ ಇದೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಾನು ವಾಸವಾಗಿರುವ ಆಸ್ತಿಯ ಸಂಖ್ಯೆಯನ್ನು ನಮೂದು ಮಾಡಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಾನು ವಾಸವಾಗಿರುವ ಮನೆಯ ನಂಬರ ವಿಪಿಸಿ ನಂಃ336/ಎ ಎಂದು ಬರೆಸಿರುತ್ತೇನೆ. ವಿಪಿಸಿ ನಂಃ336/ಎ ಕ್ಕೆ ನನ್ನ ಹೆಸರು ದಾಖಲು ಇರುವುದಿಲ್ಲ, ಸಾಕ್ಷಿ ಮುಂದುವರೆದು ನನ್ನ ಅಣ್ಣನ ಹೆಸರು ಮಾಬುಸಾಬ ನಬೀಸಾಬ ನದಾಫ ಇವರ ಹೆಸರು ಇದೆ ಎಂದು ನುಡಿಯುತ್ತಾರೆ.

2. ಈ ದಾವೆ ಆಸ್ತಿ ನಂಃ336/ಎ ಗೆ ಸಂಬಂದಪಟ್ಟ ಹಾಗೇ ನಡೆದಿರುತ್ತೆದೆ. ನನಗೆ ಮಕ್ಸೂದಸಾಬ ಮೌಲಾಸಾಬ ನದಾಫ ಇವರ ಪರಿಚಯ ಇದೆ. ನನಗೆ ಇವರ ಆಸ್ತಿ ನಂಬರ ಗೊತ್ತಿಲ್ಲ. ಮಕ್ಸೂದಸಾಬ ಮೌಲಾಸಾಬ ನದಾಫ ಇವರ ಆಸ್ತಿಯ ಪೂರ್ವಕ್ಕೆ ಬಾಬುಸಾಬ ನದಾಫ ಇವರ ಆಸ್ತಿ ಇದೆ, ದಕ್ಷಿಣಕ್ಕೆ ರಸ್ತೆ, ಉತ್ತರಕ್ಕೆ ಹಾದಿಮನಿ ಇವರಿಗೆ ಖುಲ್ಲಾ ಜಾಗೆ ಇದೆ ಹಾಗೂ ಪಶ್ಚಿಮಕ್ಕೆ ನಮ್ಮ ಆಸ್ತಿ ಇದೆ.

3. ದಕ್ಷಿಣಕ್ಕೆ ರಸ್ತೆ ಇರುವ ಬಗ್ಗೆ ಹೇಳಿದ್ದು, ಸದರಿ ರಸ್ತೆ ಪೂರ್ವದಿಂದ ಪಶ್ಚಿಮದ ಕಡೆಗೆ ಹೋಗುತ್ತದೆ. ಈ ರೀತಿ ಪೂರ್ವದಿಂದ ಪಶ್ಚಿಮಕ್ಕೆ ಸದರಿ ರಸ್ತೆ ನಮ್ಮ ಆಸ್ತಿಯವರಗೆ ಹೋಗುತ್ತದೆ. ವಿಪಿಸಿ ನಂಃ336/ಎ ರ ಬಗ್ಗೆ ಹೇಳಿದ್ದು, ಅದರಲ್ಲಿ ಎಷ್ಟು ಜನ ವಾಸವಾಗಿದ್ದು ಎಂದರೆ ಸಾಕ್ಷಿ ನಾನು, ನನ್ನ ಅಣ್ಣ ಮಾಬುಸಾಬ ನದಾಫ, ಮಕ್ತುಮಸಾಬ ನದಾಫ ಮತ್ತು ಇಮಾಮಸಾಬ ನದಾಫ ಇವರು ವಾಸವಾಗಿದ್ದೇವೆ. ನಾವು ನಾಲ್ಕು ಜನ ಕೂಡಿಯೆ ಇದ್ದೇವೆ.

4. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಪ್ರತಿವಾದಿಯರು ಉತ್ತರದ ಕಡೆಗೆ ಇದ್ದಾರೆ, ನಾವು ದಕ್ಷಿಣ ಕಡೆಗೆ ಇದ್ದೇವೆ ಅಂತ ಹೇಳಿ ಬರೆಸಿರುವುದಿಲ್ಲ. ವಿಪಿಸಿ ನಂಃ16/1 ಯಾರಿಗೆ ಸೇರಿದ್ದು ಎಂದರೆ ಸಾಕ್ಷಿ ವಾದಿ ಮಹಾಬೂಬುಪೀರಾ ಇವರಿಗೆ ಸಂಬಂದಪಟ್ಟಿದ್ದು ಎಂದು ನುಡಿಯುತ್ತಾರೆ. ವಾದಿಗೆ ಸಂಬಂದಪಟ್ಟ ಆಸ್ತಿಯಲ್ಲಿ ನನಗಾಗಲೀ ಉಳಿದ ಪ್ರತಿವಾದಿಯರಿಗೆ ಆಗಲೀ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿ.

5. 1 ನೇ ಪ್ರತಿವಾದಿ ನನ್ನ ದೊಡ್ಡಪ್ಪನ ಮಗ. ನಾನು 1 ನೇ ಪ್ರತಿವಾದಿಗೆ ನನ್ನ ದೊಡ್ಡಪ್ಪನ ಮಗ ಆದ ಕಾರಣ ಅವನ ಪರ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಪ್ರತಿವಾದಿ ನನಗೆ ಸಂಬಂದಿಕರು ಇದ್ದ ಕಾರಣ ಸುಳ್ಳು ಚಕ್ಕುಬಂದಿ ತೋರಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಸಾಕ್ಷಿಯ ಸಂಪೂರ್ಣ ಪಾಟೀ ಸವಾಲು  ಮಾಡಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**Sd/-**

**ದಿವಾಣಿ ನ್ಯಾಯಾಧೀಶರು ಹಾಗೂ  ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**

**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಓ ಎಸ್ ನಂಃ27/2022**

**ಡಿ ಡಬ್ಲ್ಯೂಃ3**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ದಿಃ 09.02.2026 ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಯ್ಯೂ ಎಮ್ ಪಿ ವಕೀಲರಿಂದ ವಾದಿ ಪರ ವಕೀಲರುಃ**

1. ನಮ್ಮ ಊರು ಬೆಟ್ಟದೂರು ಆಗಿದ್ದು, ನನಗೆ ಬೆಟ್ಟದೂರು ಗ್ರಾಮದ ಮಕ್ತುಮಸಾಬ ನದಾಫ ಇವರ ಪರಿಚಯ ಇದೆ. ಮಕ್ತುಮಸಾಬ ಇವರ ಮನೆಯ ಆಸ್ತಿ ನಂಬರ ಗೊತ್ತಿಲ್ಲ. ಆದರೆ ಚಕ್ಕುಬಂದಿ ಗೊತ್ತಿದೆ, ಅವರ ಆಸ್ತಿಯ ಪೂರ್ವದ ಕಡೆ ಬೇರೆಯವರ ಆಸ್ತಿ ಇದ್ದು, ಅವರ ಹೆಸರು ಗೊತ್ತಿಲ್ಲ. ಪಶ್ಚಿಮದ ಕಡೆಗೆ ಆಸ್ತಿ ನಂಃ336/2, ಉತ್ತರಕ್ಕೆ ರಸ್ತೆ ಹಾಗೂ ದಕ್ಷಿಣಕ್ಕೆ ನಿಂಗಪ್ಪ ಹಾದಿಮನಿ ಇವರ ಮನೆ ಇದೆ.

2. ಉತ್ತರಕ್ಕೆ ರಸ್ತೆ ಇರುವ ಬಗ್ಗೆ ಹೇಳಿದ್ದು, ಅದು ಊರಿನಲ್ಲಿರುವ ಬಸ್ ಸ್ಟ್ಯಾಂಡ ಕಡೆಯಿಂದ ದರ್ಗಾದ ಕಡೆಗೆ ಹೋಗುತ್ತದೆ. ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ವಾದಿ ಮತ್ತು ಪ್ರತಿವಾದಿಯರ ಆಸ್ತಿಗಳ ನಂಬರಗಳನ್ನು ಬರೆಸಿದ್ದೀರಾ ಎಂದರೆ ಸಾಕ್ಷಿ 1 ನೇ ಪ್ರತಿವಾದಿಯದ್ದು ಬರೆಸಿದ್ದೇನೆ ಎಂದು ನುಡಿಯುತ್ತಾರೆ. ಚಕ್ಕುಬಂದಿ ನನಗೆ 1 ನೇ ಪ್ರತಿವಾದಿ ಹೇಳಿರುವುದಿಲ್ಲ, ಆ ಬಗ್ಗೆ ನನಗೆ ಮಾಹಿತಿ ಇದೆ.

3. ನಮ್ಮ ಊರಿನ ಗ್ರಾಮ ಪಂಚಾಯತ ನಂಃ16/1 ರ ಬಗ್ಗೆ ಮಾಹಿತಿ ಇದ್ದು, ಆಸ್ತಿ ನಂಃ16/1 ರ ಪೂರ್ವಕ್ಕೆ ಆಸ್ತಿ ನಂಃ16/2, ಪಶ್ಚಿಮಕ್ಕೆ ದರ್ಗಾದ ಇವರ ಮನೆ, ಉತ್ತರಕ್ಕೆ ಹಾದಿಮನಿ ಇವರ ಮನೆ ಹಾಗೂ ದಕ್ಷಿಣಕ್ಕೆ 1 ನೇ ಪ್ರತಿವಾದಿಯ ಮನೆ ಇದೆ.

4. ಆಸ್ತಿ ನಂಃ16/1 ರ ಪೂರ್ವಕ್ಕೆ ರಸ್ತೆ ಇದೆ ಎಂದರೆ ಸರಿಯಲ್ಲ. ಹಾದಿಮನಿ ಇವರ ಆಸ್ತಿಯ ದಕ್ಷಿಣಕ್ಕೆ ಮಾಬುಸಾಬ ನದಾಫ ಇವರ ಮನೆ, ಉತ್ತರಕ್ಕೆ ಹಾದಿಮನಿ ಇವರದ್ದೆ ಉಳಿದ ಆಸ್ತಿ. ನಾನು ಈಗ ಹೇಳಿದ ಹಾದಿಮನಿ ಇವರ ಆಸ್ತಿಯ ಚಕ್ಕುಬಂದಿ ಮತ್ತು 1 ನೇ ಪ್ರತಿವಾದಿ ಇವರ ಆಸ್ತಿಯ ಚಕ್ಕುಬಂದಿ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ.

5. ಪ್ರತಿವಾದಿಯರ ಪರಿಚಯ ಮೊದಲಿನಿಂದಲೂ ಇದೆ. ನನಗೆ ಪ್ರತಿವಾದಿಯರ ಪರಿಚಯ ಇದ್ದ ಕಾರಣ ಅವರ ಪರವಾಗಿ ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ. ನನಗೆ ಪ್ರತಿವಾದಿಯರ ಬಹಳ ಪರಿಚಯ ಇದ್ದ ಕಾರಣ ನಾನು ಅವರ ಪರವಾಗಿ ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಸಾಕ್ಷಿಯ ಸಂಪೂರ್ಣ ಪಾಟೀ ಸವಾಲು  ಮಾಡಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**Sd/-**

**ದಿವಾಣಿ ನ್ಯಾಯಾಧೀಶರು ಹಾಗೂ  ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**